ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಸಮಾಜ ಕಲ್ಯಾಣ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE 22/6/20

# ಹಿಂದುಳಿದ ವರ್ಗ ಇಲಾಖೆಯಲ್ಲಿ ಮುಂಬಡ್ತಿ ಹಗರಣದ ಸದ್ದು

■ **ವಿಕ ಸುದ್ದಿಲೋಕ** ಬೆಂಗಳೂರು

ರಾಜ್ಯ ಸರಕಾರದ ಬಹುತೇಕ ಇಲಾಖೆಗಳು ಕೊರೋನಾ ವಿರುದ್ಧದ ಹೋರಾಟದಲ್ಲಿ ಮಗ್ನವಾಗಿದ್ದರೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಮುಂಬಡ್ತಿ ಹಗರಣ ಸದ್ದು ಮಾಡಲಾರಂಭಿಸಿದೆ.



1997, 2002, 2007 ಹಾಗೂ 2015ರ ವೃಂದ ಮತ್ತು ನೇಮಕ ನಿಯಮವನ್ನು ಉಲ್ಲಂಘಿಸಿ ಇಬ್ಬರು ಹಿರಿಯ ಅಧಿಕಾರಿಗಳು ಮುಂಬಡ್ತಿ ವಿಚಾರದಲ್ಲಿ ಭ್ರಷ್ಟಾಚಾರಕ್ಕೆ ದಾರಿ ಮಾಡಿಕೊಟ್ಟಿದ್ದಾರೆ. ಪರಿಶಿಷ್ಟ ಜಾತಿ ಮತ್ತು ಪಂಗಡದ ಹಿತಾಸಕ್ತಿಗೆ ವಿರುದ್ಧವಾದ ಪ್ರಕ್ರಿಯೆಗಳನ್ನು ನಡೆಸಲಾಗುತ್ತದೆ ಎಂಬ ಆರೋಪ ವ್ಯಕ್ತವಾಗಿದೆ. ಈ ಅವ್ಯವಹಾರಕ್ಕೆ ಸಂಬಂಧಪಟ್ಟಂತೆ ಸಿಎಂ ಬಿ.ಎಸ್.ಯಡಿಯೂರಪ್ಪ ಹಾಗೂ ಮುಖ್ಯ ಕಾರ್ಯದರ್ಶಿ ವಿಜಯಭಾಸ್ಕರ್ ಅವರಿಗೆ ನೊಂದ ನೌಕರರು ಲಿಖಿತ ದೂರು ಸಲ್ಲಿಸಿದ್ದಾರೆ. ಇಲಾಖೆಯ ಮೂವರು ಹಿರಿಯ ಅಧಿಕಾರಿಗಳು ನೇರವಾಗಿ ಈ ಅವ್ಯವಹಾರದಲ್ಲಿ ಭಾಗಿಯಾಗಿದಾರೆಂಬ ಆರೋಪ ಈಗ ವಿವಾದಕ್ಕೆ ಕಾರಣವಾಗಿದೆ.

2015ರಲ್ಲಿ ನೇಮಕಗೊಂಡ 866 ಗ್ರೂಪ್ ಎ, ಬಿ, ಸಿ ವೃಂದದ ನೇಮಕದ ಪೈಕಿ 200 ಕಚೇರಿ ಮೇಲ್ವಿಚಾರಕರು, ವಿಸ್ತರಣಾಧಿಕಾರಿಗಳ ಹುದ್ದೆ ಮುಂಬಡ್ತಿಗೆ ಅರ್ಹವಾಗಿದೆ. ಇದರ ಜತೆಗೆ ನಿಲಯ ಪಾಲಕರು, ಪ್ರಥಮ ದರ್ಜೆ ಸಹಾಯಕರು ಹಾಗೂ ಶೀಘ್ರಲಿಪಿಕಾರರ ಹುದ್ದೆಯಲ್ಲೂ ಮುಂಬಡ್ತಿ ನೀಡಬೇಕಿದೆ. ಕೊರೋನಾ ಸಂದರ್ಭದಲ್ಲಿ ಈ ಪ್ರಕ್ರಿಯೆ ಮೇಲಾಧಿಕಾರಿಗಳಿಗೆ ಹಬ್ಬದ ವಾತಾವರಣ ಸೃಷ್ಟಿಸಿದೆ. ಬಡ್ತಿ ಬಯಸುವ ಪ್ರತಿಯೊಬ್ಬರಿಗೂ ಹಣ ನಿಗದಿ ಮಾಡಲಾಗಿದೆ. ಮುಖ್ಯಮಂತ್ರಿ ಹಾಗೂ ಮುಖ್ಯ ಕಾರ್ಯದರ್ಶಿಗೆ ಬರೆದ ಪತ್ರದಲ್ಲಿ ಅಧಿಕಾರಿಗಳ ಹೆಸರು ಸಮೇತ ನೇರ ಆರೋಪ ಮಾಡಲಾಗಿದ್ದು ಈ ಪತ್ರದ ಪ್ರತಿ 'ವಿಕ'ಗೆ ಲಭ್ಯವಾಗಿದೆ.

**ಉಲ್ಲಂಘನೆ:** 1997ರ ವೃಂದ ಮತ್ತು ನೇಮಕ ನಿಯಮ ಪ್ರಕಾರ ಮುಂಬಡ್ತಿಗೆ ಅನುಪಾತ ಹಾಗೂ ಅರ್ಹತೆ ನಿಗದಿ ಮಾಡಲಾಗಿದೆ. ನೇಮಕಗೊಂಡ ಹುದ್ದೆಯಲ್ಲಿ ಕನಿಷ್ಠ 3 ವರ್ಷ ಸೇವೆ ಕಡ್ಡಾಯವಾಗಿದೆ. ಖಾಲಿ ಇರುವ ಸ್ಥಾನಕ್ಕೆ 1:1:6:2 ಮಾದರಿಯಲ್ಲಿ ಬಡ್ತಿ ನೀಡಬೇಕಾಗುತ್ತದೆ. ಆದರೆ ಈಗ ಬಡ್ತಿಗೆ ಐದು ವರ್ಷಗಳ ಸೇವೆ ನಿಗದಿ ಮಾಡಲಾಗಿದ್ದು, ಪ್ರಥಮ ಹಾಗೂ ದ್ವಿತೀಯ ದರ್ಜೆ ಸಹಾಯಕರಾಗಿ 15ರಿಂದ 25 ವರ್ಷ ದುಡಿದವರಿಗೆ ಇದರಿಂದ ಅನ್ಯಾಯವಾಗುತ್ತಿದೆ ಎಂಬ ಕೂಗು ಕೇಳಿ ಬಂದಿದೆ. ಬಡ್ತಿ ಪ್ರಕ್ರಿಯೆ ಪೂರ್ಣಗೊಳಿಸಲು ತುರ್ತು ಡಿಪಿಸಿ ಸಭೆ ಕರೆಯಲಾಗಿದೆ. ಇದರಿಂದ ಪರಿಶಿಷ್ಟ ಜಾತಿ, ವರ್ಗದ ನೌಕರರಿಗೆ ಅನ್ಯಾಯವಾಗಲಿದ್ದು, ತಕ್ಷಣ ಪ್ರಕ್ರಿಯೆಗೆ ತಡೆ ನೀಡುವಂತೆ ಪತ್ರದಲ್ಲಿ ಒತ್ತಾಯಿಸಲಾಗಿದೆ.